19 Tumkur	2	ತುಮಕೂರು	2
20 Uttar Kannada	4	ಉತ್ತರ ಕನ್ನಡ	4
Total	64	ಒಟ್ಟು	64

ವಿಷಯ: ಸರ್ಕಾರಿ ಪದವಿ ಕಾಲೇಜಿನಲ್ಲಿ ವಿಜ್ಞಾನ ವಿಷಯಗಳನ್ನು (ಐಚ್ಛಿಕ) ಭೋಧಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1517 (2105)

ಶ್ರೀ ಜಿ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ಎರಡು (ಒಂದು ಸರ್ಕಾರಿ, ಒಂದು ಖಾಸಗಿ) ಪದವಿ ಕಾಲೇಜುಗಳು ಇದ್ದಾಗ್ಯೂ ಐಚ್ಛಿಕ ವಿಷಯವಿಲ್ಲದಿರುವುದು ಸರ್ಕಾರಕ್ಕೆ ತಿಳಿದಿದೆಯೆ.

ಆ ಹಾಗಿದ್ದಲ್ಲಿ ಸರ್ಕಾರಿ ಪದವಿ ಕಾಲೇಜಿನಲ್ಲಿ ವಿಜ್ಞಾನ ವಿಷಯ ಭೋಧಿಸುವ ಸ್ಥಿತಿ ಎಂದಿನಿಂದ ಆರಂಭಿಸುವಿರಿ.

ಇ ಇಲ್ಲದಿದ್ದಲ್ಲಿ ಎರಡು ಕಾಲೇಜಿದ್ದಾಗ್ಯೂ ಬಿ.ಎಸ್ಸಿ. ಪದವಿಗೋಸ್ಕರ ಈ ಕ್ಷೇತ್ರದ ವಿದ್ಯಾರ್ಥಿಗಳು ಹೊರಗಡೆ ಹೋಗುತ್ತಿರುವುದನ್ನು ತಪ್ಪಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಇಲ್ಲ- ಎರಡು ಐಚ್ಛಿಕ ವಿಷಯಗಳು ಅಂದರೆ ಕಲಾ ಮತ್ತು ವಾಣಿಜ್ಯ ಪ್ರತಿ ಕಾಲೇಜಿಗೂ ಮಂಜೂರಾಗಿದೆ.

ಆ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ಅಕ್ಷಯ ಯೋಜನೆಯ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ : 1518 (2108)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ ರಾಜ್ಯದಲ್ಲಿ ಅಕ್ಷಯ ಯೋಜನೆಯನ್ನು ಪ್ರಾರಂಭಿಸುವುದು ನಿಜವೇ?

ಆ ಹಾಗಿದ್ದರೆ, ಎಂದಿನಿಂದ ಪ್ರಾರಂಭವಾಯಿತು?

ಇ ಈ ಯೋಜನೆಯಿಂದ ಉಪಯೋಗ ಪಡೆಯುತ್ತಿರುವ ಮಕ್ಕಳ ಸಂಖ್ಯೆ?

ಈ ಈವರೆಗೂ ಬಿಡುಗಡೆಯಾದ ಹಣ (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಉ ಈ ಯೋಜನೆಯನ್ನು ಪ್ರಾರಂಭಿಸಿದ ನಂತರ ಶಾಲೆಯನ್ನು ಬಿಡುತ್ತಿದ್ದ ಮಕ್ಕಳ ಸಂಖ್ಯೆ ಕಡಿಮೆಯಾಗಿದೆಯೇ?

ಊ ಹಾಗಿದ್ದರೆ ಶೇಕಡ ಎಷ್ಟು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಹೌದು.

ಆ ದಿನಾಂಕ 1-11-91 ರಿಂದ

ಇ 39,27,930

ಈ ಅನುಬಂಧದಲ್ಲಿ ತೋರಿಸಿದೆ.

ಉ ಹೌದು.

ಊ ಈಗಿನ ವರದಿಗಳ ಪ್ರಕಾರ ಹಾಜರಾತಿಯು 1.92 ಲಕ್ಷ ಹೆಚ್ಚಾಗಿದೆ. ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಹಾಜರಾತಿ ಹೆಚ್ಚಿಸಿರುವ ಬಗ್ಗೆ ಲೆಖ್ಖಿಸಲಾಗುವುದು.

ಅನುಬಂಧ

ಅಕ್ಷಯ ಯೋಜನೆಯಡಿಯಲ್ಲಿ ಉಪ ನಿರ್ದೇಶಕರುಗಳಿಗೆ ಹಣ ಬಿಡುಗಡೆ ಮಾಡಿದ ಬಗ್ಗೆ ವಿವರ.

ಸರ್ಕಾರಿ ಆದೇಶ ಸಂಖ್ಯೆ: ಶಿಇ 4ಎನ್‌ಎನ್‌ಪಿ 91 (ಭಾಗ 1) ದಿನಾಂಕ : 18-2-1992ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಡಿ.ಡಿ.ಸಂಖ್ಯೆ	ನವೆಂಬರ್91	ಡಿಸೆಂಬರ್91	ಒಟ್ಟು
1	ಬೆಂಗಳೂರು.ಗ್ರಾ	0.301656	4042549-00	4109729-00	8152278-00
2	ಬೆಂಗಳೂರು.ಉ	0.301658	1565012-00	1625000-00	3190012-00
3	ಬೆಂಗಳೂರು.ದ	0.301657	2887880-00	2950000-00	5837880-00
4	ಕೋಲಾರ	0.42596	5149516-00	5200000-00	10349516-00
5	ತುಮಕೂರು	0.42597	5525313-00	5560000-00	11085313-00
6	ಚಿತ್ರದುರ್ಗ	0.42599	4874896-00	4920000-00	9794896-00
7	ಶಿವಮೊಗ್ಗ	0.420598	4193452-00	4196876-00	8390328-00
8	ಮೈಸೂರು	0.42600	5974618-00	6015000-00	11989618-00
9	ಮಂಡ್ಯ	0.42601	3503383-00	3510000-00	7013383-00
10	ದಕ್ಷಿಣ ಕನ್ನಡ	0.42602	4371035-00	4385347-00	8756382-00
11	ಮಡಿಕೇರಿ	0.42603	1018831-00	1126000-00	2144831-00
12	ಚಿಕ್ಕಮಗಳೂರು	0.42604	2332591-00	2300000-00	4692591-00
13	ಹಾಸನ	0.42605	3253879-00	3310000-00	6563879-00
14	ಬೆಳಗಾಂ	0.42606	8421496-00	8041000-00	16462496-00
15	ಬಿಜಾಪುರ	0.42607	6311861-00	6350000-00	12661361-00
16	ಧಾರವಾಡ	0.42608	7411192-00	7050000-00	14461192-00
17	ಉತ್ತರ ಕನ್ನಡ	0.42609	3028088-00	3042000-00	6070088-00
18	ಗುಲ್ಬರ್ಗ	0.42610	5080930-00	5115000-00	10195936-00
19	ಬೀದರ್	0.42611	2342205-00	2372000-00	4714205-00
20	ಬಳ್ಳಾರಿ	0.42612	4748879-00	4862733-00	9611612-00

21	ರಾಯಚೂರು	0.42613	4305278-00	4325000-00	8630278-00
			90342390-00	90425685-00	180768075-00

ವಿಷಯ: ರಾಜ್ಯದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿರುವ ಡೊನೇಷನ್ ಹಾವಳಿ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1520 (2110)

ಶ್ರೀ ಕೆ. ಎಸ್. ಈಶ್ವರಪ್ಪ, (ಶಿವಮೊಗ್ಗ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಕರ್ನಾಟಕ ರಾಜ್ಯದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳ ದೇಣಿಗೆಯ ಹಾವಳಿ ಬಗ್ಗೆ ಸರ್ಕಾರವು ಗಮನಿಸಿದೆಯೇ?

ಆ ಈ ದೇಣಿಗೆಯ ಹಾವಳಿ ತಪ್ಪಿಸಲು ಸರ್ಕಾರದ ಯೋಜನೆ ಏನು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಸರ್ಕಾರಕ್ಕೆ ಈ ಬಗ್ಗೆ ದೂರುಗಳು ಬಂದಿರುವುದಿಲ್ಲ.

ಆ ಸಮಗ್ರ ಶಿಕ್ಷಣ ಮಸೂದೆಯನ್ನು ರಾಷ್ಟ್ರಪತಿಯವರ ಅಂಗೀಕಾರಕ್ಕೆ ಕಳುಹಿಸಲಾಗಿದೆ. ಅದು ಜಾರಿಗೆ ಬಂದ ನಂತರ ದೇಣಿಗೆ ಪಿಡುಗನ್ನು ತೊಡೆದುಹಾಕಲು ಸಾಧ್ಯವಾಗುತ್ತದೆ.

ವಿಷಯ: ಟಿ. ಸಿ. ಹೆಚ್. ತರಬೇತಾದ ನಿರುದ್ಯೋಗಿ ಅಧ್ಯಾಪಕರ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1523 (2116)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಕರ್ನಾಟಕ ರಾಜ್ಯದಲ್ಲಿ ಶಿಕ್ಷಕರ ತರಬೇತಿ ಈ ತನಕ ಮುಗಿಸಿರುವ ನಿರುದ್ಯೋಗಿ ಅಧ್ಯಾಪಕರೆಷ್ಟು?

ಆ ಅವರ ಬಗ್ಗೆ ಸರ್ಕಾರದ ಚಿಂತನೆ ಏನು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಕರ್ನಾಟಕ ರಾಜ್ಯದಲ್ಲಿರುವ ನಿರುದ್ಯೋಗಿ ಟಿ.ಸಿ.ಹೆಚ್. ಅಭ್ಯರ್ಥಿಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಆದರೆ ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳಲ್ಲಿ 1991ನೇ ಡಿಸೆಂಬರ್ ಅಂತ್ಯದವರೆಗೆ 94,293 ಟಿ.ಸಿ.ಹೆಚ್ ಅಭ್ಯರ್ಥಿಗಳು ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದರು. (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಕೊಡಲಾಗಿದೆ)

ಆ 1990-91ನೇ ಸಾಲಿನಿಂದ ಶಿಕ್ಷಣ ಇಲಾಖೆಯು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಭರ್ತಿ ಮಾಡುವ ಕ್ರಮ ಕೈಗೊಂಡಿದೆ. ಹೆಚ್ಚಿನ ವಿದ್ಯಾರ್ಥಿಗಳು ಟಿ.ಸಿ.ಹೆಚ್. ತರಬೇತಿಗಳಿಂದ ಹೊರಬರುವುದನ್ನು ತಡೆಯಲು 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೆ ಯಾವುದೇ ಶಿಕ್ಷಕರ ತರಬೇತಿ ಕಾಲೇಜುಗಳನ್ನು ಪ್ರಾರಂಭಿಸುವ ಅವಶ್ಯಕತೆ ಇಲ್ಲವೆಂದು ಸರ್ಕಾರವು ನಿರ್ಧರಿಸಿದೆ.